

## ದೇಶ-ದೇಶಗಳ ನಡುವೆ ಪ್ರವಾಸಕ್ಕೆ ಅನುಮತಿ

ಯುರೋಪ್‌ನಲ್ಲಿ ದೇಶ–ದೇಶಗಳ ನಡುವೆ ಪ್ರವಾಸ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಎರಡೂ ಡೋಸ್ ಲಸಿಕೆ ಪಡೆದಿರಬೇಕು. ರಾಜ್ಯದಲ್ಲಿರುವಂತೆ, ಲಸಿಕೆ ಪಡೆದಿದ್ದರೂ ಮತ್ತೆ ಆರ್‌ಟಿ ಪಿಸಿಆರ್ ಪರೀಕ್ಷೆಯನ್ನು ಅಲ್ಲಿ ಕಡ್ಡಾಯ ಮಾಡಿಲ್ಲ. ಆಸ್ಟ್ರೇಲಿಯಾದಲ್ಲಿಯೂ ಪ್ರವಾಸಿಗರಿಗೆ ಹೆಚ್ಚು ನಿರ್ಬಂಧ ವಿಧಿಸಿಲ್ಲ. ಲಸಿಕೆ ಪಡೆಯುವುದು ಮಾತ್ರ ಕಡ್ಡಾಯ ಮಾಡಲಾಗಿದೆ. ಅಲ್ಲದೆ, ವೀಸಾ ಸೇರಿದಂತೆ ಹಲವು ಸೇವೆಗಳ ಶುಲ್ಕಗಳನ್ನು ಕಡಿಮೆ ಮಾಡಲಾಗಿದೆ.

ಪ್ರವಾಸೋದ್ಯಮ ಚೇತರಿಕೆಗೆ ಹೆಚ್ಚು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿಯೂ ಇಂತಹ ನಿಯಮ ರೂಪಿಸುವ ಅವಶ್ಯಕತೆ ಇದೆ ಮತ್ತು ಅರ್ಹ ಎಲ್ಲರಿಗೂ ಲಸಿಕೆ ನೀಡುವ ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕಾಗಿದೆ.

ಇಂತಹ ದುರಾಸೆ ಕಾಣುತ್ತಿದ್ದು, ‘ಕೋಳಿಯನ್ನು ಒಂದೇ ಬಾರಿಗೆ ಸಾಯಿಸುವ’ ಧಾವಂತವೂ ಎದ್ದು ಕಾಣುತ್ತಿದೆ ಎಂಬ ಬೇಸರವೂ ಈ ವಲಯದಲ್ಲಿ ವ್ಯಕ್ತವಾಗುತ್ತಿದೆ.

‘ಪ್ರವಾಸಿಗರು ಜಾಸ್ತಿ ಬಂದಾಗ, ಜಾಸ್ತಿ ದರ ನಿಗದಿ ಮಾಡಿದರೆ ಹೆಚ್ಚು ಲಾಭ ಗಳಿಸಬಹುದು ಎಂಬ ಭಾವನೆ ಹಲವು ಹೋಮ್‌ಸ್ಟೇ ಮತ್ತು ರೆಸಾರ್ಟ್‌ನವರಲ್ಲಿದೆ. ಯಾವ ರೀತಿ ಉತ್ತಮ ಸೇವೆ ನೀಡಬೇಕು ಎಂಬುದಕ್ಕಿಂತ, ಯಾವ ರೀತಿ ಹೆಚ್ಚು ಲಾಭ ಮಾಡಿಕೊಳ್ಳಬೇಕು ಎಂದು ಯೋಚಿಸುತ್ತಾರೆ. ಇಷ್ಟು ದಿನ ವ್ಯಾಪಾರ ಇರಲಿಲ್ಲ. ಬಂದ ಪ್ರವಾಸಿಗರಿಂದಲೇ ಹೆಚ್ಚು ವಸೂಲಿ ಮಾಡಿಬಿಡಬೇಕು ಎಂದುಕೊಳ್ಳುತ್ತಾರೆ. ಇಂತಹ ಮನಸ್ಥಿತಿಯಿಂದ ದೀರ್ಘಾವಧಿಯಲ್ಲಿ ಉದ್ಯಮಕ್ಕೆ ಹೊಡೆತ ಬೀಳಲಿದೆ’ ಎಂದು ಕೊಡಚಾದ್ರಿಯ ‘ಬರೇಕಲ್ ಫಾರ್ಮ್‌ಸ್ಟೇ’ ಮಾಲೀಕ ವಿಕ್ರಂ ಉಡುಪ ಹೇಳುತ್ತಾರೆ.

ಕಳೆದ ಲಾಕ್‌ಡೌನ್ ನಂತರ, ಕೊಡಚಾದ್ರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಚಾರಣದ ಮತ್ತು ಇತರೆ ಸೇವೆಗಳ ದರಪಟ್ಟಿಯನ್ನು ಏಳೆಂಟು ಪಟ್ಟು ಹೆಚ್ಚಿಸಲಾಗಿದೆ.

ಕೊಡಚಾದ್ರಿಯಲ್ಲಿ ಟ್ರೆಕ್ಕಿಂಗ್ ಹೋಗುವುದಕ್ಕೆ ಮೊದಲು ₹25 ಇತ್ತು. 2021ರ ಮೇ ಎರಡನೇ ವಾರದಿಂದ ಈ ಶುಲ್ಕವನ್ನು ₹400ಕ್ಕೆ ಏರಿಸಲಾಗಿದೆ. ನಾಲ್ಕು ಸದಸ್ಯರ ಒಂದು ಕುಟುಂಬ ಜೀಪ್‌ನಲ್ಲಿ ಕೇವಲ ಚಾರಣ ಮುಗಿಸಿಕೊಂಡು ಬರಲು, ಜೀಪು, ಅರಣ್ಯ ಇಲಾಖೆ ಶುಲ್ಕ ಎಲ್ಲ ಸೇರಿ ₹2,700 ಖರ್ಚು ಮಾಡಬೇಕು. ಇಷ್ಟು ಹಣ ವ್ಯಯಿಸುವುದಕ್ಕಿಂತ ಬೇರೆ ಸ್ಥಳಗಳಿಗೆ ಹೋಗುವುದೇ ಉತ್ತಮ ಅಥವಾ ಮನೆಯಲ್ಲಿರುವುದೇ ಕ್ಷೇಮ ಎನ್ನುವ ಮನಸ್ಥಿತಿಗೆ ಪ್ರವಾಸಿಗರು ಬಂದಿದ್ದಾರೆ. ಕೊಡಚಾದ್ರಿಯಲ್ಲಿ ಮಾತ್ರವಲ್ಲ, ರಾಜ್ಯದ ಯಾವುದೇ ಚಾರಣದ ಸ್ಥಳದಲ್ಲಿಯೂ ‘ಚಿನ್ನದ ಮೊಟ್ಟೆ ಇಡುವ ಕೋಳಿಯ’ ಕತ್ತು ಕೊಯ್ಯುವ ಕೆಲಸ ನಡೆಯುತ್ತಿದೆ.

‘ನಮ್ಮ ವ್ಯಾಪ್ತಿಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋವಿಡ್ ನಿರ್ಬಂಧಗಳನ್ನು ಹೆಚ್ಚು ಬಿಗಿಗೊಳಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಸ್ವಲ್ಪ ಸಡಿಲ ಇದೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ಬರುವವರಿಗೆ ಸ್ವಲ್ಪ ಗೊಂದಲಗಳು ಆಗುವುದು ನಿಜ’ ಎಂದು ಕಾರ್ಕಳ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ. ರುತ್ರನ್ ಹೇಳಿದರು.

‘ಅರಣ್ಯ ಇಲಾಖೆ ವ್ಯಾಪ್ತಿಯ ಪ್ರವಾಸಿ ತಾಣಗಳಲ್ಲಿ ನಾಲ್ಕು ವರ್ಷಗಳಿಂದ ಪ್ರವೇಶ ಶುಲ್ಕ ಜಾಸ್ತಿ ಮಾಡಿರಲಿಲ್ಲ. ಮೇ ತಿಂಗಳಿಂದ ಹೊಸ ದರಪಟ್ಟಿ ಜಾರಿಗೆ ಬಂದಿದೆ. ಕೊಡಚಾದ್ರಿ ಬೆಟ್ಟದ ಮೇಲೆ ದೇವಸ್ಥಾನ ಮುಂತಾದ ಕಡೆ ಹೋಗಲು ಮೊದಲು ₹25 ಇತ್ತು. ಈಗ ₹50ಕ್ಕೆ ಏರಿಸಲಾಗಿದೆ. ಅರಣ್ಯ ಇಲಾಖೆಯು ₹400 ನಿಗದಿ ಮಾಡಿಲ್ಲ. ಬೇರೆ ಬೇರೆ ಖರ್ಚು ಸೇರಿ ಜನ ಹಾಗೆ ಹೇಳಿರಬಹುದು’ ಎಂದೂ ಅವರು ಸ್ಪಷ್ಟಪಡಿಸಿದರು.

### ಹೆಚ್ಚು ತೆರಿಗೆ

ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಪ್ರವಾಸಿ ವಾಹನಗಳ ಮೇಲೆ ಹೆಚ್ಚು ತೆರಿಗೆ ವಿಧಿಸಲಾಗುತ್ತಿದೆ ಎಂಬ ಆರೋಪ ಟ್ರಾವೆಲ್ಸ್ ಸಂಸ್ಥೆಯವರದು.

ತಮಿಳುನಾಡಿನ ವಾಹನ ಕೇರಳ, ಆಂಧ್ರಪ್ರದೇಶಕ್ಕೂ ಹೋಗಬಹುದು, ಆಂಧ್ರಪ್ರದೇಶದ ವಾಹನ ಕೇರಳಕ್ಕೂ ಬರಬಹುದು. ಆದರೆ, ನಮ್ಮ ರಾಜ್ಯಕ್ಕೆ ಬಂದರೆ ಮಾತ್ರ ಹೆಚ್ಚು ತೆರಿಗೆ ವಿಧಿಸಲಾಗುತ್ತಿದೆ. ಹೀಗಾಗಿ, ಎಷ್ಟೋ ಪ್ರವಾಸಿಗರು ಇಲ್ಲಿಗೆ ಬರಲು ಹಿಂದೇಟು ಹಾಕುತ್ತಾರೆ. ಸುಲಭವಾಗಿ ದುಡ್ಡು ಬರುತ್ತದೆ ಎಂಬ ಕಾರಣಕ್ಕೆ ಇಷ್ಟಬಂದಂತೆ ತೆರಿಗೆ ವಿಧಿಸಿದರೆ ಹೇಗೆ ಎಂದು ಟ್ರಾವೆಲ್ಸ್ ಸಂಸ್ಥೆಯವರು ಪ್ರಶ್ನಿಸುತ್ತಾರೆ.

### ಲಂಚ ಕೊಟ್ಟರೆ ನೆಗೆಟಿವ್ ವರದಿ!

ಕೋವಿಡ್ ನಿಯಂತ್ರಿಸುವ ಉದ್ದೇಶದಿಂದ ಸರ್ಕಾರ ರೂಪಿಸಿರುವ ಹತ್ತು ಹಲವು ನಿರ್ಬಂಧಗಳು ಬೇರೆ ರೀತಿಯ ಸಮಸ್ಯೆಗಳಿಗೂ ಕಾರಣವಾಗುತ್ತಿವೆ. ದುಡ್ಡು ಕೊಟ್ಟರೆ ಸಾಕು, ಯಾವುದೇ ಪರೀಕ್ಷೆ ನಡೆಸದೆ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ಸಿಗುತ್ತಿದೆ! ಪರಿಸ್ಥಿತಿ ಹೀಗಿದ್ದಾಗ, ಸರ್ಕಾರ ಜಾರಿಗೆ ತಂದಿರುವ ಮಾರ್ಗಸೂಚಿಗಳ ಉದ್ದೇಶವೇ ನಿರರ್ಥಕವಾಗುತ್ತಿದೆ.

‘ಚಿಕ್ಕಮಗಳೂರು, ಕುದುರೆಮುಖ, ಕಾರ್ಕಳ, ಕೊಡಚಾದ್ರಿ ಸೇರಿದಂತೆ ಹಲವು ಕಡೆ ಹೋಮ್‌ಸ್ಟೇಗಳಲ್ಲಿ, ಹೋಟೆಲ್‌ಗಳಲ್ಲಿ ಉಳಿದುಕೊಳ್ಳಲು ಬರುವ ಪ್ರವಾಸಿಗರಿಗೆ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಕಡ್ಡಾಯ